ಜ್ಞಾಪಕ ಚಿತ್ರಶಾಲೆ

## ಪ್ಲೇಗ್ ಮಾರಿಯ ಕರಾಳ ನೆನಪು



# ಇತಿಹಾಸದ ಕಾರ್ಕೋಟಕ ಕಲಿಸುವುದೇ ವಿವೇಕದ ಪಾಠ?

■ ಮಾಂಟೊ

1965–66ರಲ್ಲಿ ಇಂಗ್ಲೆಂಡ್‌ನಲ್ಲಿ ಲಕ್ಷಾಂತರ ಜನರನ್ನು ಬಲಿತೆಗೆದುಕೊಂಡಿದ್ದ ಪ್ಲೇಗ್ ಸಾಂಕ್ರಾಮಿಕ ರೋಗದ ಕರಾಳ ನೆನಪುಗಳು, ‘ದಿ ಗ್ರೇಟ್ ಪ್ಲೇಗ್’ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಇಂಗ್ಲೆಂಡ್‌ನ ಕಾಕ್ ಆ್ಯಂಡ್ ಕೀ ಅಲೇ ಎಂಬ ಕೆಳವರ್ಗದ ಜನರು ವಾಸಿಸುವ ಗಲ್ಲಿಯೊಂದರಲ್ಲಿ ಪ್ಲೇಗ್‌ನ ಮೃತ್ಯುಚುಂಬನದಿಂದ ಆದ ಅನಾಹುತವನ್ನು ಕಟ್ಟಿಕೊಡುತ್ತಲೇ ಇಡೀ ದೇಶದ ಅಂದಿನ ದುರಂತವನ್ನು ಧ್ವನಿಸುವುದು ‘ದಿ ಗ್ರೇಟ್ ಪ್ಲೇಗ್’ ಎಂಬ ಹೆಸರಿನ ಸಾಕ್ಷ್ಯಚಿತ್ರದ ವಿಶೇಷ. ಈ ಸಾಕ್ಷ್ಯಚಿತ್ರ ನಮಗೆ ಇತಿಹಾಸದ ಒಂದು ಕರಾಳ ಕಾಲಘಟ್ಟದ ನೆರಳನ್ನು ದರ್ಶಿಸುತ್ತದೆ; ಆದರೆ ನಾವು ಈಗ ಎದುರಾಗಿ ನಿಂತಿರುವ ಕೊರೊನಾ ಎಂಬ ವಿಷಕನ್ಯೆಯನ್ನು ಎದುರಿಸುವ ವಿವೇಕವನ್ನೂ ಮೂಡಿಸಬಲ್ಲದೇ?